

ಮುಳುಗಿಹೋಗಿತ್ತು. ನಮ್ಮಿಬ್ಬರ ನಡುವಿನ ಬೆಸ್ಟ್ ನೆನಪು ಯಾವುದೋ ಎಂದರೆ ಅವನು ಈ ಘಳಿಗೆಯನ್ನೇ ನನ್ನ ಅಂಗೈಗಿಡುತ್ತಾನೆ. ಅವನ ಕಣ್ಣುಗಳನ್ನು ದಿಟ್ಟಿಸಿದ ಆ ಕ್ಷಣ ಅವನನ್ನು ಅಪ್ಪಿಕೊಳ್ಳಬೇಕು ಅನ್ನಿಸಿತ್ತು, ಇನ್ನೊಂದು ಮಾತನಾಡದೆ ಅಲ್ಲಿಂದ ಹೊರಟುಬಂದಿದ್ದೆ. ದಕ್ಷಿಣ ಭಾರತದವಳಾದರೂ, ಕರ್ನಾಟಕಿಗಿಂತ ಹಿಂದೂಸ್ತಾನಿ ಸಂಗೀತ ಎಂದರೆ ನನಗೆ ಹುಚ್ಚು. ಪದಗಳಿಗಿಂತ ಭಾವಪ್ರಧಾನವಾದ ಅದರ ಪ್ರವಾಹದಲ್ಲಿ ಎಚ್ಚರದ ಎಳೆ ಕತ್ತರಿಸಿಕೊಂಡು ಕಳೆದುಹೋಗಿಬಿಡುತ್ತೇನೆ. ರಾಗಗಳನ್ನು ಇಂದಿಗೂ ಗುರುತಿಸಲಾರೆ, ಆದರೆ ಅದರಲ್ಲಿ ನನ್ನ ಸೃಷ್ಟಿ, ಸ್ಥಿತಿ, ಲಯ ಎಲ್ಲ ಘಟಿಸುತ್ತವೆ. ಆ ಸಂಗೀತದ ನದಿಯಲ್ಲಿ ತೇಲುತ್ತಿದ್ದಾಗ ಅಚಾನಕ್ ಬಂದ ತಬಲಾದ 'ಧಾ ಧಿನ್' ಸುಳಿಯಂತೆ ಸೆಳೆದುಕೊಂಡು ಹೋಗಿ ಯಾವುದೋ ತಿಳಿಯದ ರೇವಿನಲ್ಲಿ ಬಿಟ್ಟಿತ್ತು. ಕಣ್ತೆರೆದು ನೋಡಿದರೆ ಇವನು, ಕಪ್ಪು ಅಂಗಿ, ಬೆಳ್ಳಿ ಚುಮುಕಿಸಿದಂತಿದ್ದ ಅಸ್ತವ್ಯಸ್ತ ತಲೆಗೂದಲು, ಅದೇ ಪೆಪ್ಪರ್ ಸಾಲ್ಟ್ ದಾಡಿ, ಎರಡು ದಟ್ಟ ಹುಬ್ಬಿನ ನಡುವಿನ ವಿಭೂತಿ, ಕುಂಕುಮ, ಕೆನ್ನೆಸವರಿ ದೃಷ್ಟಿ ತೆಗೆಯಬೇಕು ಅನ್ನಿಸುವ ದ್ರಾವಿಡ ಕಳೆ. ನೋಡಿದ ಕೂಡಲೆ ಮನದಲ್ಲಿ ಬಂದ ಹೆಸರು 'ರುದ್ರ'. ಇಂದಿಗೂ ಅವನನ್ನು